ಎಂಬ ಆಶಯದಲ್ಲಿ ಚಳವಳಿ ತೀವ್ರಗೊಂಡಿತು. ‘ಬ್ರಿಟಿಷರೇ ಭಾರತ ಬಿಟ್ಟು ತೊಲಗಿ’ ಎಂಬುದು 1942ರ ಆಗಸ್ಟ್ 9ರಿಂದ ಹಮ್ಮಿಕೊಂಡ ಚಳವಳಿಯ ಘೋಷವಾಕ್ಯವಾಗಿತ್ತು. ಇದು ‘ಕ್ವಿಟ್ ಇಂಡಿಯಾ ಚಳವಳಿ’ ಎಂದೇ ಪ್ರಸಿದ್ಧವಾಯಿತು. ದೇಶಾದ್ಯಂತ ಅಭೂತಪೂರ್ವ ಸ್ಪಂದನೆ ಸಿಕ್ಕಿತು. ಜನಸಾಮಾನ್ಯರು ತಂತಮ್ಮ ಸ್ಥಳಗಳಲ್ಲೇ ಸಂಘಟಿತರಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು. ಅನೇಕ ತಂಡಗಳು ಪೋಸ್ಟ್ ಆಫೀಸ್ ಕೆಲಸ ನಡೆಯದಂತೆ, ರೈಲುಗಳು ಚಲಿಸದಂತೆ ತಡೆದರು; ಇಂಥದೊಂದು ಚಳವಳಿಯ ಭಾಗವಾಗಿ ಬಾಂಬೆಯ ಶಿವಾಜಿ ಪಾರ್ಕಿನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಗಾಂಧಿಯವರು ಭಾಗವಹಿಸಿ ಕ್ವಿಟ್ ಇಂಡಿಯಾ ಚಳವಳಿಯ ತೀವ್ರತೆಯನ್ನು ಹೆಚ್ಚಿಸಲು ನಿರ್ಧರಿಸಲಾಗಿತ್ತು.

ಬ್ರಿಟಿಷ್ ಸರ್ಕಾರದ ಪೊಲೀಸ್ ಪಡೆ ಮುಂಚೆಯೇ ಗಾಂಧಿಯವರಲ್ಲಿಗೆ ಬಂದು ‘ಯು ಆರ್ ಅಂಡರ್ ಅರೆಸ್ಟ್’ ಎಂದಿತು. ಜೈಲಿಗೆಂದೂ ಜಗ್ಗದ ಗಾಂಧಿ ಬಂಧಿಯಾದರು. ಹೋಗುವುದಕ್ಕೆ ಮುಂಚೆ ಗಾಂಧಿ ಕಸ್ತೂರ್‌ಬಾಗೆ ಹೇಳಿದರು:

‘ಶಿವಾಜಿ ಪಾರ್ಕ್‌ನ ಬಹಿರಂಗ ಸಭೆ ನಡೀಲೇಬೇಕು. ನನ್ನ ಬದಲು ನೀನು ಹೋಗು, ಚಾಲನೆಕೊಡು. ಯಾವುದೇ ಕಾರಣಕ್ಕೂ ಸಭೆಯೂ ನಿಲ್ಲಬಾರದು; ಚಳವಳಿಯೂ ನಿಲ್ಲಬಾರದು’ ಎಂದು ಹೇಳಿದರು.

ಕಸ್ತೂರ್‌ಬಾ ಸಿದ್ಧರಾದರು. ಈ ವೇಳೆಗಾಗಲೇ ದೇಶದ ಮಹಿಳೆಯರಿಗೆ ವಿಶೇಷ ಕರೆಕೊಟ್ಟಿದ್ದರು:

‘ಭಾರತದ ಮಹಿಳೆಯರು ತಮ್ಮ ಸಂಕಲ್ಪ ಶಕ್ತಿಯನ್ನು ತೋರಿಸಬೇಕಾದ ಸಂದರ್ಭ ಬಂದಿದೆ. ಜಾತಿ, ಧರ್ಮದಂತಹ ವ್ಯತ್ಯಾಸಗಳನ್ನು ಮೀರಿ ಮಹಿಳೆಯರು ಈ ಹೋರಾಟದಲ್ಲಿ ಭಾಗವಹಿಸಬೇಕು; ಸತ್ಯ ಮತ್ತು ಅಹಿಂಸೆ ನಮ್ಮ ಆದರ್ಶಗಳಾಗಬೇಕು.’

ಕಸ್ತೂರ್‌ಬಾ ಬಾಂಬೆಗೆ ಹೊರಟರು. ಶಿವಾಜಿ ಪಾರ್ಕ್‌ನಲ್ಲಿ ಏನಿಲ್ಲವೆಂದರೂ ಒಂದು ಲಕ್ಷದಷ್ಟು ಜನ ಸೇರಿದ್ದರು. ಗಾಂಧಿಯವರ ಬಂಧನವಾಗಿದ್ದರೂ ಕಸ್ತೂರ್‌ಬಾ ಬಂದು ಚಾಲನೆ ನೀಡುವ ಸುದ್ದಿಯಿಂದ ನೆರೆದಿದ್ದ ಜನರು ಉತ್ಸಾಹಿತರಾಗಿ ಕಾಯುತ್ತಿದ್ದರು.

ಆದರೆ ಕಸ್ತೂರ್‌ಬಾ ಶಿವಾಜಿ ಪಾರ್ಕ್ ಪ್ರವೇಶಿಸುವುದಕ್ಕೆ ಮುಂಚೆಯೇ ಬ್ರಿಟಿಷ್ ಆಡಳಿತ ಅವರನ್ನು ಬಂಧಿಸಿತು. ಕಸ್ತೂರ್‌ಬಾ ಎದೆಗುಂದಲಿಲ್ಲ. ಅಲ್ಲೇ ಇದ್ದ ಸುಶೀಲಾ ನಯ್ಯರ್‌ಗೆ, ‘ಸಭೆಯು ಯಾವುದೇ ಕಾರಣಕ್ಕೂ ರದ್ದಾಗಬಾರದು. ನಮ್ಮ ಜನರ ಒಗ್ಗಟ್ಟನ್ನು ಇಂಥ ಬಂಧನಗಳಿಂದ ಮುರಿಯಲು ಸಾಧ್ಯವಿಲ್ಲ. ಚಳವಳಿಯನ್ನು ದಮನ ಮಾಡಲು ಆಗುವುದಿಲ್ಲ. ಜನರಿಗೆ ಧೈರ್ಯದಿಂದ ಮುಂದುವರೆಯಲು ಹೇಳಿ’ ಎಂದು ತಿಳಿಸಿದರು.

ಕಸ್ತೂರ್‌ಬಾ ಅವರನ್ನು ಅರ್ತೂರ್ ರಸ್ತೆಯಲ್ಲಿರುವ ಚಿಕ್ಕ ಜೈಲಿನಲ್ಲಿಟ್ಟರು. ಆಗಾಖಾನ್ ಬಂಗಲೆಯನ್ನೇ ಜೈಲಾಗಿ ಪರಿವರ್ತಿಸಿ ಗಾಂಧಿಯವರನ್ನು ಅಲ್ಲಿಟ್ಟಿದ್ದರು. ಈ ಬಂಗಲೆಯು ಆಗಾಖಾನ್ ಅರಮನೆಯೆಂದೇ ಪ್ರಸಿದ್ಧಿಯಾಗಿತ್ತು. ಗಾಂಧಿಯವರನ್ನು ಅದರೊಳಗೆ ಬಂಧಿಸಿಟ್ಟಿದ್ದರಿಂದ ‘ಜೈಲಾಯಿತು’. ಆದರೆ ಅದು ಗೃಹಬಂಧನದ ರೀತಿಯಲ್ಲಿತ್ತು. ಕಸ್ತೂರ್‌ಬಾ ಇದ್ದದ್ದು ಚಿಕ್ಕ ಜೈಲು. ಚಿಕ್ಕಕೋಣೆ, ಸೊಳ್ಳೆಗಳ ಕಾಟ. ಅನಾರೋಗ್ಯ ಬೇರೆ. ಆದರೂ ಕಸ್ತೂರ್‌ಬಾ ಎದೆ ಗುಂದಲಿಲ್ಲ. ಅಲ್ಲಿಯೇ ಇದ್ದುಕೊಂಡು ಅಲ್ಲಿನ ಅವ್ಯವಸ್ಥೆ ಬಗ್ಗೆ ಅಧಿಕಾರಿಗಳಿಗೆ ದೂರು ಕೊಟ್ಟರು. ಒಂದು ತಿಂಗಳ ನಂತರ, ಅನಾರೋಗ್ಯದ ಕಾರಣದಿಂದಲೊ ಏನೋ, ಗಾಂಧಿಯವರಿದ್ದಲ್ಲಿಗೇ ಕಸ್ತೂರ್‌ಬಾ ಅವರನ್ನು ಕಳಿಸಿಕೊಡಲಾಯಿತು. ಅಲ್ಲಿಯೇ ದೇವದಾಸ್ ಕೂಡ ಇದ್ದ.

ಆಗಾಖಾನ್ ಬಂಗಲೆಗೆ ಭದ್ರಕಾವಲು. ಕಸ್ತೂರ್‌ಬಾ ಅವರ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿತ್ತು. ಉಸಿರಾಟದ ತೊಂದರೆ ಹೆಚ್ಚಾಗುತ್ತಿತ್ತು. ಒಂದು ದಿನ 1944ರ ಫೆಬ್ರುವರಿ 22ರಂದು ಇದ್ದಕ್ಕಿದ್ದಂತೆ ಭಕ್ತಿಗೀತೆಯನ್ನು ಹಾಡಲು ಆರಂಭಿಸಿದರು. ಗಾಂಧಿ ಯಾವುದೋ ಪುಸ್ತಕದಲ್ಲಿ ಮುಳುಗಿದ್ದರು. ದೇವದಾಸ್ ಪತ್ರಿಕೆ ಓದುತ್ತಿದ್ದ. ಭಕ್ತಿಗೀತೆಯನ್ನು ಕಷ್ಟಪಟ್ಟು ಹಾಡುತ್ತಿದ್ದ ತಾಯಿಗೆ ‘ಬೇಡಮ್ಮ’ ಎಂದು ಹೇಳಲು ಮನಸ್ಸಾಯಿತು. ಆದರೆ ಗಾಂಧಿ ಸನ್ನೆ ಮಾಡಿದರು. ದೇವದಾಸ್ ಸುಮ್ಮನಾದ.

ಕಸ್ತೂರ್‌ಬಾ ಅವರು ಏದುಸಿರು ಬಿಡುತ್ತಲೇ ಭಕ್ತಿಗೀತೆ ಹಾಡುವುದನ್ನು ದೂರದಿಂದ ನೋಡಿದ ಸಹಾಯಕ ಆತಂಕದಲ್ಲಿ ಬಂದ.

‘ಅಮ್ಮ ಹಾಡಬೇಡಿ. ನಿಮಗೆ ಈಗಾಗಲೇ ಉಬ್ಬಸ ಇದೆ. ನ್ಯುಮೋನಿಯಾ ಬೇರೆ. ಆಯಾಸ ಆಗುತ್ತೆ.’

‘ಆಯಸ್ಸು ಮುಗೀತಾ ಇರುವಾಗ ಆಯಾಸದ ಚಿಂತೆ ಯಾಕಪ್ಪ’ ಎಂದರು ಕಸ್ತೂರ್‌ಬಾ.

ಸಹಾಯಕನ ಕಣ್ಣು ತುಂಬಿಕೊಂಡಿತು.

‘ಹಾಗೆಲ್ಲ ಹೇಳ್‌ಬೇಡಿ ಅಮ್ಮ. ನೀವಿನ್ನೂ ಬದುಕಬೇಕು. ಬದುಕ್ತೀರ’ ಎಂದ.

ಕಸ್ತೂರ್‌ಬಾ ವಿಷಾದದಿಂದ ನಸುನಕ್ಕರು.

ಹಾಡುತ್ತ ಹಾಡುತ್ತ ಏದುಸಿರು ಬಿಟ್ಟರು.

ಉಸಿರು ಮೇಲೆ ಕೆಳಗೆ ಆಡತೊಡಗಿತು.

ಮೆಲ್ಲಗೆ ‘ಬಾಪು’ ಎಂದು ಕರೆದರು.

ಬಾಪು ಗಾಬರಿಯಿಂದ ಬಂದರು.

ಕಸ್ತೂರ್‌ಬಾ ಅವರನ್ನು ತಮ್ಮ ಎದೆಗೆ ಒರಗಿಸಿಕೊಂಡು ಕೂಡಿಸಿಕೊಂಡರು. ಆತಂಕಕ್ಕೆ ಸಿಕ್ಕಿದ್ದ ದೇವದಾಸ್ ಔಷಧಿಯನ್ನು ಒಂದು ಕಪ್ಪಿಗೆ ಹಾಕಿಕೊಂಡು ಬಂದ. ಗಾಂಧಿ ಸ್ವತಃ ತಾವೇ ಕಸ್ತೂರ್‌ಬಾಗೆ ಔಷಧಿ ಕುಡಿಸಿದರು.

ಧೈರ್ಯ ಹೇಳಿದರು:

‘ಚಿಂತೆ ಮಾಡ್ಬೇಡ. ಬೇಗ ಹುಷಾರಾಗ್ತೀಯ.’

ಕಸ್ತೂರ್‌ಬಾ ವಿಷಾದದಿಂದ, ‘ಹುಷಾರು... ಆ... ಹ್ಞೂ’ ಎಂದು ಸುಮ್ಮನಾದರು. ದೇವದಾಸನ ಕಡೆಗೆ ನೋಡಿದರು.

ದೇವದಾಸ ಕಣ್ತುಂಬಿ ನಿಂತಿದ್ದ.

ಕಸ್ತೂರ್ ತಾಯಿಯನ್ನು ಕಣ್ಣಲ್ಲೇ ತುಂಬಿಕೊಂಡಿದ್ದ!

ಕಸ್ತೂರ್ ಹತ್ತಿರ ಕರೆದರು. ಹತ್ತಿರ ಬಂದು ಕೂತುಕೊಂಡ.

ಕಸ್ತೂರ್‌ಬಾ ಮಗನ ತಲೆ ನೇವರಿಸಿದರು.

‘ಹುಷಾರು ಮಗು ಹುಷಾರು’ ಎಂದರು.

ಹಾಗೇ ಆಯಾಸಗೊಂಡರು. ಬಾಪು ಕಡೆ ನೋಡಿದರು.

ಬಾಪು ಕಸ್ತೂರ್‌ಬಾ ಅವರನ್ನು ಮೆಲ್ಲಗೆ ಮಲಗಿಸಿದರು.

ಮೃದುವಾಗಿ ತಲೆ ನೇವರಿಸಿದರು.

ಕಸ್ತೂರ್‌ಬಾ ಬಾಪುವಿನ ಕೈಹಿಡಿದುಕೊಂಡರು.

ಬಾಪುವನ್ನೇ ನೋಡುತ್ತ ಕ್ಷೀಣ ದನಿಯಲ್ಲಿ ‘ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್’ ಎಂದು ಗುನುಗಿದರು.

ಗಾಂಧಿ ನಡುಗುತ್ತಿದ್ದ ದನಿಯನ್ನು ನಿಯಂತ್ರಿಸಿಕೊಳ್ಳುತ್ತ ‘ಈಶ್ವರ ಅಲ್ಲಾ ತೇರಾ ನಾಮ್’ ಎಂದು ಸೇರಿಸಿದರು. ಉಸಿರಾಟದ ತೊಂದರೆ ಹೆಚ್ಚಾದಂತೆ ಕಸ್ತೂರ್ ಬಾ ಮತ್ತೆ ‘ರಘುಪತಿ ರಾಘವ ರಾಜರಾಮ್, ಪತಿತ ಪಾವನ ಸೀತಾರಾಮ್’ ಎಂದಾಗ ಗಾಂಧಿ ತಮ್ಮ ನಡಗುವ ದನಿಯಲ್ಲೇ ‘ಈಶ್ವರ ಅಲ್ಲಾ ತೇರಾ ನಾಮ್’ ಎಂದರು.

ಹೀಗೆ ಕಸ್ತೂರ್‌ಬಾ ಎರಡು ಮೂರು ಸಾರಿ ಹೇಳಿದರು.

ಕಡೆಗೊಮ್ಮೆ ಮೇಲೆ ನೋಡುತ್ತ ಕೈ ಜೋಡಿಸಿದರು.

ನಡುಗುತ್ತಿದ್ದ ಕ್ಷೀಣ ಸ್ವರದಲ್ಲಿ –

ಸಬ್‌ಕೋ ಸನ್ಮತಿ ದೇ ಭಗವಾನ್

ಎಂದು ಎರಡು ಸಾರಿ ಹೇಳಿದರು.

ಗಾಂಧಿಗೆ ಕೊನೆಕ್ಷಣದ ಅರಿವಾಯಿತು.

ದೇವದಾಸ್ ಕಡೆ ನೋಡಿದರು; ಆತ ಓಡಿದ;

ಗಂಗಾಜಲವನ್ನು ತಂದ;

ಗಾಂಧಿಯನ್ನೊಮ್ಮೆ, ತನ್ನನ್ನೊಮ್ಮೆ, ಮೇಲಕ್ಕೊಮ್ಮೆ

ನೋಡುತ್ತಿದ್ದ ತಾಯಿಯ ಬಾಯಿಗೆ ಬಿಟ್ಟ,

ಮೇಲೆತ್ತಿ ಜೋಡಿಸಿದ್ದ ಕಸ್ತೂರ್‌ಬಾ ಕೈಗಳು ‘ಸಬ್‌ಕೋ ಸನ್ಮತಿ ದೇ ಭಗವಾನ್’ ಎಂಬ ದನಿಯೊಂದಿಗೆ ಕೆಳಗೆ ಕುಸಿದವು!

ಕುಸಿದ ಸದ್ದಿನಲ್ಲಿ ಸಾವ ನುಡಿದವು!

* * *

ಗಾಂಧಿ ಬೆಚ್ಚಿ ಬಿದ್ದು ಮುಚ್ಚಿದ ಕಣ್ಣು ತೆರೆದರು.

‘ಕಸ್ತೂರ್’ ಎಂದು ಉದ್ಗರಿಸಿದರು.

ತಲ್ಲಣಗೊಂಡು ನೋಡಿದರು.

ಕಸ್ತೂರ್‌ಬಾ ಇರಲಿಲ್ಲ!

ಸಬರಮತಿ ಆಶ್ರಮದ ಕತ್ತಲಲ್ಲಿ,

ತಾನು ಒಬ್ಬರೇ!

ಒಂಟಿಜೀವ!

ನೋವಿನಿಂದ ಮತ್ತೆ ಕಣ್ಣು ಮುಚ್ಚಿಕೊಂಡರು.

ಕಸ್ತೂರ್‌ಬಾ ಚಿತೆ ಉರಿಯುತ್ತಿತ್ತು.

ಗಾಂಧಿ ಕಣ್ಣೀರು ಹರಿಯುತ್ತಿತ್ತು.!

(ಮುಗಿಯಿತು)

‘ಕಸ್ತೂರ್‌ಬಾ ವರ್ಸಸ್ ಗಾಂಧಿ’ ಧಾರಾವಾಹಿ ಕುರಿತ ಅಭಿಪ್ರಾಯಗಳಿಗೆ ಸ್ವಾಗತ. ಪ್ರತಿಕ್ರಿಯಿಸಿ:

feedback@sudha.co.in